ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು):

ಅ) ಈ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವ ಸಾಧ್ಯಸಾಧ್ಯತೆ ಮತ್ತು ಅಗತ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಈ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವ ಸಾಧ್ಯಸಾಧ್ಯತೆ ಮತ್ತು ಅಗತ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಪಾವತಿ ಮತ್ತು ನಿಲುಗಡೆ ಯೋಜನೆ

357(348) - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಪಾವತಿ ಮತ್ತು ನಿಲುಗಡೆ ಯೋಜನೆಯಡಿ ಎಷ್ಟು ಕಡೆ ವಾಹನ ನಿಲುಗಡೆ ಶುಲ್ಕ ವಸೂಲಿ ಮಾಡಲು ಅನುಮತಿ ನೀಡಿದೆ? (ವಾರ್ಡ್‌ವಾರು ಮಾಹಿತಿ ನೀಡುವುದು)

ಆ) ಎಷ್ಟು ವರ್ಷಗಳಿಗೆ ಅನುಮತಿ ನೀಡಲಾಗಿದೆ? ಗುತ್ತಿಗೆ ಸಮಯಗಳು ಏನು?

ಇ) ಯೋಜನೆಯಿಂದ ಪಾಲಿಕೆಗೆ ಬಂದಿರುವ ಆದಾಯ ಎಷ್ಟು?

ಈ) ಸಾರ್ವಜನಿಕರು ಈ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) 64 ರಸ್ತೆಗಳನ್ನು ಪಾವತಿ ಮತ್ತು ನಿಲುಗಡೆ ಯೋಜನೆಯಡಿಯಲ್ಲಿ ತರಲಾಗಿದೆ. (ವಾರ್ಡ್‌ವಾರು ಪಟ್ಟಿಯನ್ನು ಲಗತ್ತಿಸಿದೆ).

ಆ) ಗರಿಷ್ಟ 12 ತಿಂಗಳಿಗೆ ಅನುಮತಿಯನ್ನು ನೀಡಲಾಗಿದೆ.

ಇ) ಈ ಯೋಜನೆಯಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ನವೆಂಬರ್ 2000 ರಿಂದ ಜೂನ್ ಅಂತ್ಯದವರೆಗೆ ರೂ. 4.03 ಕೋಟಿ ಆದಾಯ ಬಂದಿರುತ್ತದೆ.

ಈ) ಈ ವ್ಯವಸ್ಥೆಗೆ ಸಾರ್ವಜನಿಕರಿಂದ ವಿರೋಧ ಕಂಡುಬಂದಲ್ಲಿ. ಇದನ್ನು ಜಾರಿ ಮಾಡುವ ಸಂದರ್ಭದಲ್ಲಿ ಕೆಲವು ಕಡೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು ಆ ಬಗ್ಗೆ ಕ್ರಮ ಕೈಗೊಂಡಿದೆ.

ವಾರ್ಡ್‌ವಾರು ಪಾಮತಿ ಮತ್ತು ನಿಲುಗಡೆ ಸ್ಥಳಗಳ ಪಟ್ಟಿ

ಕ್ರಮ ಸಂಖ್ಯೆ	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಪಾಮತಿ ಮತ್ತು ನಿಲುಗಡೆಯ ಸ್ಥಳಗಳ ಹೆಸರು	ಸಂಖ್ಯೆ	ಷರಾ
1	3	ಯಶವಂತಪುರ	1ನೇ ಮುಖ್ಯರಸ್ತೆ ಯಶವಂತಪುರ: ಯಶವಂತಪುರ ಷಾಪಿಂಗ್ ಕಾಂಪ್ಲೆಕ್ಸ್‌ಯಿಂದ ಹೆಚ್.ಎಂ.ಟಿ. ಮುಖ್ಯರಸ್ತೆವರೆಗೆ.	01	
2	7	ಮಲ್ಲೇಶ್ವರಂ	ಮಲ್ಲೇಶ್ವರಂ 8ನೇ ಅಡ್ಡರಸ್ತೆ: 4ನೇ ಮುಖ್ಯರಸ್ತೆಯಿಂದ ಸಂಪಿಗೆ ರಸ್ತೆವರೆಗೆ ಸಂಪಿಗೆ ರಸ್ತೆ : ಸೆಂಟ್ರಲ್ ಥಿಯೇಟರ್‌ನಿಂದ ಮಲ್ಲೇಶ್ವರಂ 18ನೇ ಅಡ್ಡರಸ್ತೆ	02	
3.	14	ನಾಗಪುರ	ಮಹಾಲಕ್ಷ್ಮಿ ಲೇಔಟ್ 12ನೇ ಮುಖ್ಯರಸ್ತೆ: ಪಶ್ಚಿಮ ಕಾರ್ಡ್ ರಸ್ತೆಯಿಂದ ಪಂಚಮುಖಿ ದೇವಸ್ಥಾನವರೆಗೆ ರಾಜಾಜಿನಗರ 10ನೇ ಅಡ್ಡರಸ್ತೆ: ಡಾ: ರಾಜ್‌ಕುಮಾರ್ ರಸ್ತೆಯಿಂದ ಪಶ್ಚಿಮ ವಾರ್ಡ್ ರಸ್ತೆವರೆಗೆ ರಾಜಾಜಿನಗರ 1ನೇ ಎನ್ ಬ್ಲಾಕ್: ಮಹಾಕವಿ ಕುವೆಂಪು ರಸ್ತೆಯಿಂದ ರಾಜಾಜಿನಗರ 10ನೇ ಅಡ್ಡರಸ್ತೆವರೆಗೆ	03	
4.	15	ರಾಜಾಜಿನಗರ	ರಾಜಾಜಿನಗರ ಕಾಂಪ್ಲೆಕ್ಸ್‌ನ ಸುತ್ತಮುತ್ತಲಿನ ನಿಲುಗಡೆ ಸ್ಥಳ	01	
5.	26	ಸೇವಾಶ್ರಮ	ಶೇಷಾದ್ರಿಪುರಂ 1ನೇ ಮುಖ್ಯರಸ್ತೆ: ಪ್ಯಾಲೇಸ್ ಗುಟ್ಟಹಳ್ಳಿಯಿಂದ ಸ್ವಸ್ತಿಕ್ ವೃತ್ತದವರೆಗೆ	01	
6.	27	ಗಾಂಧಿನಗರ	ಟ್ಯಾಂಕ್ ಬಂಡ್ ರಸ್ತೆ: ಶಾಂತಲಾ ಸಿಲ್ಕ್ ಹೌಸ್‌ನಿಂದ ಆರ್ಯುವೇದಿಕ್ ಕಾಲೇಜ್‌ವರೆಗೆ. ಸುಬೇಧಾರ್ ಛತ್ರಂ ರಸ್ತೆ: ಆನಂದ್‌ರಾವ್ ವೃತ್ತದಿಂದ ಕೆ.ಜಿ ವೃತ್ತದವರೆಗೆ ಕಾಳಿದಾಸಮಾರ್ಗ: ಕೆ.ಜಿ. ರಸ್ತೆಯಿಂದ ಶೇಷಾದ್ರಿ ರಸ್ತೆವರೆಗೆ ಗಾಂಧಿನಗರ 2ನೇ 4ನೇ ಮುಖ್ಯರಸ್ತೆ ಹಾಗೂ 3ನೇ 4ನೇ 6ನೇ ಅಡ್ಡರಸ್ತೆಗಳು ಗಾಂಧಿನಗರ 3ನೇ 5ನೇ ಮುಖ್ಯರಸ್ತೆ ಹಾಗೂ 1ನೇ 2ನೇ ಅಡ್ಡರಸ್ತೆಗಳು	05	
7.	28	ಚಿಕ್ಕಪೇಟೆ	ಕಿಲಾರಿ ರಸ್ತೆ ಅವಿನ್ಯೂ ರಸ್ತೆ: ಕೃಷ್ಣ ಬಿಲ್ಡಿಂಗ್ ಎದುರಿನ ನಿಲುಗಡೆ ಸ್ಥಳ ಚಿಕ್ಕಪೇಟೆ ಮುಖ್ಯರಸ್ತೆ : ಅವಿನ್ಯೂ ರಸ್ತೆಯಿಂದ ಬಳೇಪೇಟೆ ವೃತ್ತದವರೆಗೆ	03	

8.	29	ಕಾಟನ್‌ಪೇಟೆ	ಅವಿನ್ಯೂ ರಸ್ತೆ:ಸಿಟಿ ಮಾರ್ಕೆಟ್‌ಯಿಂದ ಆಸ್ಪತ್ರೆ ರಸ್ತೆವರೆಗೆ ಕಾಶಿ ವಿಶ್ವೇಶ್ವರ ದೇವಸ್ಥಾನ ಎದುರಿನ ನಿಲುಗಡೆ ಸ್ಥಳ	02
9.	32	ಕೆಂಪಾಪುರ	ಮಾಗಡಿರಸ್ತೆ: ಲೆಪ್ರಸಿ ಆಸ್ಪತ್ರೆಯಿಂದ ಪ್ರಸನ್ನ ಚಿತ್ರಮಂದಿರದವರೆಗೆ	01
10.	44	ಜಗಜೀವನ ರಾಮನಗರ	ಡಾ: ಮೋದಿ ರಸ್ತೆ:ಪಶ್ಚಿಮ ಕಾರ್ಡ್ ರಸ್ತೆಯಿಂದ ಶಂಕರ ಮಠದ ವರೆಗೆ	
11.	48	ಸುಧಾಮನಗರ	ಜೆ.ಸಿ.ರಸ್ತೆ: ನಗರ ಪಾಲಿಕೆಯ ಪಕ್ಕದಲ್ಲಿನ ನಿಲುಗಡೆ ಸ್ಥಳ ಬಹು ಹಂತಸ್ತಿನ ನಿಲ್ದಾಣ ನಗರ ಪಾಲಿಕೆ ಕಛೇರಿ ಕಟ್ಟಡದ ಪಕ್ಕದಲ್ಲಿನ ನಿಲುಗಡೆ ಸ್ಥಳ ಮತ್ತು ಜೆ.ಸಿ. ರಸ್ತೆ ಜೆ.ಸಿ ರಸ್ತೆ: ಟೌನ್ ಹಾಲ್ ಎದುರಿನ ನಿಲುಗಡೆ ಸ್ಥಳ ಲಾಲ್‌ಬಾಗ್ ಮುಖ್ಯರಸ್ತೆ: ಸುಬ್ಬಯ್ಯ ರಸ್ತೆಯಿಂದ ಲಾಲ್ ಬಾಗ್ ಪ್ರೆಂಟ್ ಗೇಟ್ ವರೆಗೆ.	03
12.	49	ಕೆಂಪೇಗೌಡ ನಗರ	ಗಾಂಧಿಬಜಾರ್ ಮುಖ್ಯರಸ್ತೆ ಡಿ.ವಿ.ಜಿ. ರಸ್ತೆ	02
13.	51	ಬಸವನಗುಡಿ	ಆಲ್ಬರ್ಟ್ ವಿಕ್ಟರ್ ರಸ್ತೆ: ಕಲಾಸಿಪಾಳ್ಯಂ ಬಸ್ ನಿಲ್ದಾಣ ಕಾನ್ವೆಂಟ್ ರಸ್ತೆವರೆಗೆ	01
14.	58	ಜಯನಗರ	9ನೇ ಮುಖ್ಯರಸ್ತೆ ಜಯನಗರ: 22ನೇ ಅಡ್ಡರಸ್ತೆಯಿಂದ 33ನೇ ಅಡ್ಡರಸ್ತೆವರೆಗೆ 27ನೇ ಅಡ್ಡರಸ್ತೆ ಜಯನಗರ: 9ನೇ ಮುಖ್ಯರಸ್ತೆಯಿಂದ 11ನೇ ಮುಖ್ಯರಸ್ತೆವರೆಗೆ 11ನೇ ಮುಖ್ಯರಸ್ತೆ ಜಯನಗರ:27ನೇ ಅಡ್ಡರಸ್ತೆಯಿಂದ 33ನೇ ಅಡ್ಡರಸ್ತೆವರೆಗೆ	03
15.	67	ಕೋರಮಂಗಲ	ಕೋರಮಂಗಲ ಷಾಪಿಂಗ್ ಕಾಂಪ್ಲೆಕ್ಸ್‌ನ ಸುತ್ತಮುತ್ತಲಿನ ನಿಲುಗಡೆ ಸ್ಥಳ	01
16.	70	ಶಾಂತಿನಗರ	ಓಸಾಂಗರಿ ರಸ್ತೆ:ಲಾಂಗ್ ಫೋರ್ಡ್ ರಸ್ತೆಯಿಂದ ರಿಚ್‌ಮೆಂಡ್ ರಸ್ತೆವರೆಗೆ ಬ್ರಿಗೇಡ್ ರಸ್ತೆ: ಎಂ.ಜಿ. ರಸ್ತೆಯಿಂದ ರೆಕ್ಸ್‌ಚಿತ್ರಮಂದಿರದವರೆಗೆ ರೆಸಿಡೆನ್ಸಿ ರಸ್ತೆ:ಬಿಷಪ್ ಕಾಟನ್ ಬಾಯ್ಸ್ ಸ್ಕೂಲಿಗೆ ಹೊಂದಿಕೊಂಡ ರಸ್ತೆ ಸೇಂಟ್ ಮಾರ್ಕ್ಸ್ ರಸ್ತೆ:ಕ್ಯಾಶ್ ಫಾರ್ಮಸಿಯಿಂದ ಎಂ.ಜಿ ರಸ್ತೆಯವರೆಗೆ. ಚರ್ಚ್ ಪಕ್ಕದ ರಸ್ತೆಗಳು, ಮಹಾನ್ 3ನೇ ಅಡ್ಡರಸ್ತೆ, ಪಾಪಣ್ಣ ಲೇನ್ ಲೇಡಿ ಕರ್ಜನ್ ರಸ್ತೆ:ಕಬ್ಬನ್ ರಸ್ತೆಯಿಂದ ಆಸ್ಪತ್ರೆ ರಸ್ತೆ ವರೆಗೆ	08

			ಬ್ರಿಗೇಡ್ ರಸ್ತೆ:ಎಂ.ಜಿ. ರಸ್ತೆಯಿಂದ ರೆಕ್ಸ್‌ಚಿತ್ರಮಂದಿರ ದವರೆಗೆ	
			ಬ್ರಿಗೇಡ್ ರಸ್ತೆ: ಅಪೇರಾ ಚಿತ್ರಮಂದಿರದಿಂದ ರಿಚ್‌ಮೆಂಡ್ ರಸ್ತೆಯವರೆಗೆ ಮಿಲ್ಲರ್ ರಸ್ತೆ	
17.	71	ಆಸ್ಟಿನ್ ಟೌನ್	ಪಿ.ಯು.ಬಿ.ಗೆ ಹೊಂದಿಕೊಂಡ ರಸ್ತೆ: ಎಂ.ಜಿ.ರಸ್ತೆಯಿಂದ ರೆಸಿಡೆನ್ಸಿ ರಸ್ತೆಯವರೆಗೆ	03
			ಎಂ.ಜಿ.ರಸ್ತೆ: ಕುಂಬ್ಲೆ ವೃತ್ತದಿಂದ ಡಿಕನ್ಸ್‌ನ್ ರಸ್ತೆವರೆಗೆ.	
			ಎಂ.ಜಿ. ರಸ್ತೆ: ಡಿಕನ್ಸ್‌ನ ರಸ್ತೆಯಿಂದ ಟ್ರಿನಿಟಿ ವೃತ್ತದವರೆಗೆ	
18.	75	ಜೋಗುಪಾಳ್ಯ	ಜಾನ್ಸ್‌ನ ಮಾರ್ಕೆಟ್ :ಥಾಮಸ್ ಕೆಪೆ ಎದುರಿನ ನಿಲುಗಡೆ ಸ್ಥಳ	01
19.	77	ಸಂಪಂಗಿರಾಮ ನಗರ	ಕಾಮರಾಜ ರಸ್ತೆ:ಎಂ.ಜಿ.ರಸ್ತೆಯಿಂದ ಕಮರ್ಷಿಯಲ್ ಸ್ಟ್ರೀಟ್‌ವರೆಗೆ.	07
			ಮೈನ್‌ಗಾರ್ಡ್ ರಸ್ತೆ: ಕಬ್ಬನ್ ರಸ್ತೆಯಿಂದ ಡಿಸ್ಪೆನ್ಸ್‌ರಿ ರಸ್ತೆಯವರೆಗೆ.	
			ಜ್ಯೂವೆಲರಿ ಸ್ಟ್ರೀಟ್: ಕಮರ್ಷಿಯಲ್ ಸ್ಟ್ರೀಟ್‌ಯಿಂದ ಧರ್ಮರಾಜ ಕೋಯಿಲ್ ರಸ್ತೆಯವರೆಗೆ.	
			ಚರ್ಚ್ ಸ್ಟ್ರೀಟ್: ಬ್ರಿಗೇಡ್ ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆಯವರೆಗೆ.	
			ಲ್ಯಾವ್‌ಲೀ ರಸ್ತೆ (ಎಂ.ಜಿ. ರಸ್ತೆಯಿಂದ ರಿಚ್‌ಮೆಂಡ್ ರಸ್ತೆ ವರೆಗೆ) ಲ್ಯಾವ್‌ಲೀ ಆಡ್ಡರಸ್ತೆ	
			(ಲ್ಯಾವ್‌ಲೀ ರಸ್ತೆಯಿಂದ ಕಸ್ತೂರಿಬಾ ರಸ್ತೆಯವರೆಗೆ) ಮತ್ತು ಲ್ಯಾವ್‌ಲೀ ಆಡ್ಡರಸ್ತೆಗಳು 1ನೇ 2ನೇ ಮತ್ತು 4ನೇ 5ನೇ 6ನೇ 7ನೇ ಆಡ್ಡರಸ್ತೆಗಳು ಮತ್ತು ವಾಲ್ಟನ್ ರಸ್ತೆ.	
			ಡಿಕನ್ಸ್‌ನ್ ರಸ್ತೆ: ಕಾಮರಾಜ ರಸ್ತೆಯಿಂದ ಎನ್.ಓ.ಟಿ. ಗರ್ಲ್ಸ್ ಸ್ಕೂಲ್ ವರೆಗೆ	
			ವಿಠಲ್ ಮಲ್ಯ ರಸ್ತೆ: ಕಸ್ತೂರಿಬಾ ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆಯವರೆಗೆ	
20.	78	ವಸಂತನಗರ	ಕನ್ನಿಂಗ್ ಹ್ಯಾಂ ರಸ್ತೆ:ಕ್ವೀನ್ಸ್ ವೃತ್ತ ಜಂಕ್ಷನ್ ಆಪ್ ಕನ್ನಿಂಗ್ ಹ್ಯಾಂ ರಸ್ತೆಯಿಂದ ಮಿಲ್ಲರ್ ರಸ್ತೆಜಂಕ್ಷನ್ ವರೆಗೆ	04
			ಆಲಿ ಆಸ್ಕರ್ ರಸ್ತೆ: ಮಿಲ್ಲರ್ ರಸ್ತೆಯಿಂದ ರಾಜ್‌ಭವನ್ ರಸ್ತೆಯವರೆಗೆ ಎಡ್ವರ್ಡ್ ರಸ್ತೆ	
			ಕನ್ನಿಂಗ್ ಹ್ಯಾಂ ಆಡ್ಡರಸ್ತೆ (ಉತ್ತರ ಮತ್ತು ದಕ್ಷಿಣ ಕಡೆ)	
21.	79	ಶಿವಾಜಿನಗರ	ಇನ್‌ಪೆಂಟ್ರಿ ಆಡ್ಡರಸ್ತೆ: ಇನ್‌ಪೆಂಟ್ರಿ ರಸ್ತೆಯಿಂದ ಆಸ್ಪತ್ರೆ ರಸ್ತೆಯವರೆಗೆ (ಬ್ಲೂ ಕ್ರಾಸ್ ಛೇಂಬರ್ಸ್ ಮುಂಭಾಗ ದಿಂದ)	09

			ಇನ್‌ಪೆಂಟ್ರಿ ಅಡ್ಡರಸ್ತೆ (ಈಡನ್ ಪಾರ್ಕ್ ರಸ್ತೆ)	
			ಮಿಡ್ ಪೋರ್ಡ್ ಗಾರ್ಡನ್	
			ಇನ್‌ಪೆಂಟ್ರಿ ರಸ್ತೆ: ಶಪೀನಾ ಪ್ಲಾಜದಿಂದ ಅಲಿ ಅಸ್ಕರ್ ರಸ್ತೆವರೆಗೆ	
			ಕಮರ್ಷಿಯಲ್ ಸ್ಟ್ರೀಟ್: ಕಾಮರಾಜ ರಸ್ತೆಯಿಂದ ಜುಮ್ಮಾ ಮಸೀದಿ ರಸ್ತೆಯವರೆಗೆ ಇಬ್ರಾಹಿಂದ ಸಾಹೇಬ್ ಸ್ಟ್ರೀಟ್	
			ಡಿಸ್ಪೆನ್ಸರಿ ರಸ್ತೆ: ಓ.ಪಿ.ಹೆಚ್. ರಸ್ತೆಯಿಂದ ಚಾಮರಾಜ ರಸ್ತೆಯವರೆಗೆ ಆಸ್ಪತ್ರೆ ರಸ್ತೆ	
			ಲೇಡಿ ಕರ್ಜನ್ ರಸ್ತೆ:ಕಬ್ಬನ್ ರಸ್ತೆಯಿಂದ ಆಸ್ಪತ್ರೆ ರಸ್ತೆವರೆಗೆ	
22.	88	ಬಾಣಸವಾಡಿ	ಕೇಂಬ್ರಿಡ್ಜ್ ರಸ್ತೆ: ಅಲಸೂರು ಪೊಲೀಸ್ ಠಾಣೆಯಿಂದ ಸಾಯಿಬಾಬ ಟೆಂಪಲ್ ವರೆಗೆ	01
23.	92	ಜಯಮಹಲ್	ಕೋಲ್ಸ್ ರಸ್ತೆ :ಬೋರ್ ಬ್ಯಾಂಕ್ ರಸ್ತೆಯಿಂದ ವಿಲರ್ ರಸ್ತೆವರೆಗೆ	01 01
			ಒಟ್ಟು	64

ಬೆಂಗಳೂರು ನಗರದ ದೊಡ್ಡ ಮೋರಿಗಳ ಹೂಳು ತೆಗೆಯುವುದು

358(351) - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ದೊಡ್ಡ ಮೋರಿಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರು ನಗರದಲ್ಲಿರುವ ದೊಡ್ಡ ಮೋರಿಗಳ ಸಂಖ್ಯೆ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

ಇ) ದೊಡ್ಡ ಮೋರಿಗಳ ಅಭಿವೃದ್ಧಿಗೆ ಮತ್ತು ಹೂಳು ತೆಗೆಯಲು ಪಾಲಿಕೆ ಕಳೆದ 3 ವರ್ಷಗಳಿಂದ ವೆಚ್ಚ ಮಾಡಿರುವ ಹಣವೆಷ್ಟು?

ಈ) ಈ ಮೋರಿಗಳಲ್ಲಿನ ಹೂಳು ತೆಗೆಯಲು ಪಾಲಿಕೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಯವರು):

ಅ) ನಗರದ ರಾಜ ಕಾಲುವೆಗಳಲ್ಲಿ ಕೆಲವೆಡೆ ಹೂಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬೆಂಗಳೂರು ನಗರದಲ್ಲಿ ಈ ಕೆಳಕಂಡ ನಾಲ್ಕು ರಾಜ ಕಾಲುವೆಗಳು ಇರುತ್ತದೆ.

1. ವೃಷಭಾವತಿ ಕಣಿವೆ - ಈ ಕಣಿವೆಯು ಮಲ್ಲೇಶ್ವರಂ ರಾಜಾಜಿನಗರ ಗಾಂಧಿನಗರ ಬಿನ್ನಿಪೇಟೆ ಮತ್ತು ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರಗಳ ಮೂಲಕ ಹಾದು ಹೋಗುತ್ತದೆ.